Completed

# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 404
2. ಸದಸ್ಯರ ಹೆಸರು : ಶ್ರೀ ಮೋಹನ್ ಕುಮಾರ್ ಕೊಂಡಜ್ಜಿ (ನಾಮನಿರ್ದೇಶನ ಹೊಂದಿದವರು)
3. ಉತ್ತರಿಸಬೇಕಾದ ದಿನಾಂಕ : 16.02.2023
4. ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಯವರು

| ಕ್ರ ಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | ಸರ್ಕಾರದ ಅನುಕಂಪದ ಆಧಾರದ ಮೇಲೆ ನೇಮಕಾತಿಗಾಗಿ ಕೆ.ಸಿ.ಎಸ್.ಆರ್. ನಿಯಮಾವಳಿಗಳಂತೆ ಯಾವ ಯಾವ ದಾಖಲೆಗಳನ್ನು ಒದಗಿಸಬೇಕಾಗಿದೆ ಮತ್ತು ಯಾರಿಂದ ಪಡೆದು ಒದಗಿಸಬೇಕಾಗಿದೆ. ಎಷ್ಟು ಬಾರಿ ದಾಖಲೆಗಳನ್ನು ಒದಗಿಸಬೇಕಾಗಿದೆ. (ಚೆಕ್ ಲಿಸ್ಟ್‌ನೊಂದಿಗೆ ಸಂಪೂರ್ಣ ವಿವರ ನೀಡುವುದು). | ಕರ್ನಾಟಕ ಸಿವಿಲ್ ಸೇವಾ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು 1996 ರನ್ವಯ ರಾಜ್ಯ ಸರ್ಕಾರಿ ನೌಕರನು ಸೇವೆಯಲ್ಲಿರುವಾಗಲೇ ಮೃತಪಟ್ಟಲ್ಲಿ ಆತನ ಅವಲಂಬಿತರಲ್ಲಿ ಒಬ್ಬರಿಗೆ ಅರ್ಹತೆಯ ಆಧಾರದ ಮೇಲೆ ಅನುಕಂಪದ ಆಧಾರದ ನೇಮಕಾತಿಯನ್ನು ನೀಡಲು ಅವಕಾಶವನ್ನು ಕಲ್ಪಿಸಲಾಗಿದೆ. ಸದರಿ ನಿಯಮಗಳಲ್ಲಿ ಅನುಕಂಪದ ನೇಮಕಾತಿಯನ್ನು ಹೊಂದಲು ಕೆಲವು ಷರತ್ತು ಮತ್ತು ನಿಬಂಧನೆಗಳನ್ನು ವಿಧಿಸಲಾಗಿದೆ. ನೇಮಕಾತಿ ಪ್ರಾಧಿಕಾರಕ್ಕೆ ಅನುಕಂಪದ ನೇಮಕಾತಿ ನೀಡುವ ಸಂದರ್ಭದಲ್ಲಿ 1996ರ ನಿಯಮಗಳಲ್ಲಿ ವಿಧಿಸಿರುವ ಷರತ್ತು/ನಿಬಂಧನೆಗಳನ್ನು ಪೂರೈಸಲು ಅಗತ್ಯವಾದ ಎಲ್ಲಾ ದಾಖಲೆಗಳನ್ನು ಒದಗಿಸಬೇಕಾಗುತ್ತದೆ. ಕರ್ನಾಟಕ ಸಿವಿಲ್ ಸೇವಾ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು 1996ರ ನಿಯಮಗಳಲ್ಲಿ ಚೆಕ್‌ಲಿಸ್ಟ್‌ನ್ನು ನಿರ್ದಿಷ್ಟಪಡಿಸಲಾಗಿರುವುದಿಲ್ಲ. |
| (ಆ) | ಸರ್ಕಾರದ ಅನುಕಂಪದ ಆಧಾರದ ಮೇಲೆ ನೇಮಕಾತಿಗಾಗಿ ಕೆಲವು ಇಲಾಖೆಗಳು ವಿವಿಧ ರೀತಿಯ ದಾಖಲೆಗಳನ್ನು ಒದಗಿಸಲು ಸೂಚಿಸುತ್ತಿರುವುದರಿಂದ ಅನುಕಂಪದ ಆಧಾರದ ಮೇಲೆ ನೇಮಕಾತಿಗಳು ತುಂಬಾ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಕೆ.ಸಿ.ಎಸ್.ಆರ್ ನಿಯಮಗಳಂತೆ ದಾಖಲೆಗಳನ್ನು ಪಡೆದು ನೇಮಕಾತಿ ಮಾಡಲು ಸರ್ಕಾರವು ಆದೇಶಿಸುವುದೇ: (ಸಂಪೂರ್ಣ ವಿವರ ನೀಡುವುದು) | ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. |
| (ಇ) | ಸರ್ಕಾರದ ಅನುಕಂಪದ ಆಧಾರದ ಮೇಲಿನ ನೇಮಕಾತಿಗಳು ತುಂಬಾ ವಿಳಂಬವಾಗುತ್ತಿದ್ದು ಕೆ.ಸಿ.ಎಸ್.ಆರ್. ನಿಯಮಾವಳಿಗಳಂತೆ ಮೂರು ತಿಂಗಳೊಳಗಾಗಿ ನೇಮಕಾತಿ ಮಾಡದಿದ್ದಲ್ಲಿ. ಪರಿಹಾರ ನೀಡಲು ಸರ್ಕಾರವು ಕ್ರಮಕ್ಕೆಗೊಳ್ಳುವುದೇ: | ಅಂತಹ ಯಾವುದೇ ಪ್ರಸ್ತಾವನೆಯು ಸರ್ಕಾರದ ಮುಂದಿರುವುದಿಲ್ಲ. |



Generated from eOffice by G JAGADEESHA, CMO-JS(GJ), JOINT SECREATRY, CMO on 14/02/2023 06:21 PM

| | | |
|---|---|---|
| ಈ) | ಕೆ.ಸಿ.ಎಸ್.ಆರ್ ನಿಯಮಗಳಂತೆ ಮೂರು ತಿಂಗಳಿಗಿಂತಲು ಹೆಚ್ಚು ವಿಳಂಬವಾದ ಪ್ರಕರಣಗಳಿಗೆ ಪರಿಹಾರ ನೀಡುವಂತೆ ಮಾನ್ಯ ನ್ಯಾಯಾಲಯಗಳಿಂದ ನಿರ್ದೇಶನ/ಆದೇಶಗಳನ್ನು ಹೊರಡಿಸಲಾಗಿದೆಯೇ; (ಆದೇಶಗಳನ್ನು ಹೊರಡಿಸಿದ್ದಲ್ಲಿ ಸಂಪೂರ್ಣ ವಿವರ ನೀಡುವುದು). | ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. |
| ಉ) | ಸದರಿ ಕೆ.ಸಿ.ಎಸ್.ಆರ್ ನಿಯಮಗಳಂತೆ ವಿಳಂಭ ಮಾಡದೇ ಕಾಲಮಿತಿಯೊಳಗೆ ಅನುಕಂಪದ ಆಧಾರದ ಮೇಲಿನ ನೇಮಕಾತಿಗಳನ್ನು ಮಾಡಲು ಸರ್ಕಾರವು ಎಲ್ಲಾ ಇಲಾಖೆಗಳಿಗೆ ಕ್ರಮ ಕೈಗೊಳ್ಳಲು ನಿರ್ದೇಶನ/ಆದೇಶವನ್ನು ನೀಡಲಾಗುವುದೇ? (ಸಂಪೂರ್ಣ ವಿವರ ನೀಡುವುದು). | ಅನುಕಂಪದ ಆಧಾರದ ಮೇಲೆ ನೇಮಕಾತಿಗಳಲ್ಲಿ ವಿಳಂಬವಾಗುತ್ತಿರುವುದನ್ನು ಗಮನಿಸಲಾಗಿದೆ. ಈ ಹಿನ್ನೆಲೆಯಲ್ಲಿ 1996ರ ಅನುಕಂಪದ ಆಧಾರದ ನೇಮಕಾತಿ ನಿಯಮಗಳನ್ನು ಸರಳೀಕರಣಗೊಳಿಸಿ ಅಧಿಸೂಚನೆ ಸಂಖ್ಯೆ: ಸಿಆಸುಇ 26 ಸೇಆನೇ 2018, ದಿನಾಂಕ: 09.04.2021 ರಲ್ಲಿ ಕೆಲವು ತಿದ್ದುಪಡಿಗಳನ್ನು ತರಲಾಗಿದೆ. |

ಸಂಖ್ಯೆ: ಸಿಆಸುಇ 05 ಸೇಅನೇ 2023

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ.



Generated from eOffice by G JAGADEESHA, CMO-JS(GJ), JOINT SECREATRY, CMO on 14/02/2023 06:21 PM